ನ್ಯಾಯಲಯದ ತೀರ್ಪಿನನ್ವಯ, ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್.2 ಎಸ್ಎಲ್ಸಿ.90 ದಿನಾಂಕ 6-8-90ರಲ್ಲಿ. ದಿ: 1-7-84ಕ್ಕೆ ಮುಂದೆ ದಿನಗೂಲಿ ಮೇಲೆ ನೇಮಕಾತಿ ಹೊಂದಿ, ಸದರೀ ಆದೇಶ ದಿನಾಂಕ 6-8-90 ರಂದು ಸೇವೆಯಲ್ಲಿರುವ ದಿನಗೂಲಿ ನೌಕರರುಗಳ ಸೇವೆಯನ್ನು ಸಕ್ರಮಗೊಳಿಸಲು ಆದೇಶ ಹೊರಡಿಸಿದೆ. ಹಾಗೂ ದಿನಾಂಕ 1-7-84ರ ನಂತರ ನೇಮಕಾತಿ ಮಾಡಿಕೊಳ್ಳಲಾದ ಸಾಂದರ್ಭಿಕ: ದಿನಗೂಲಿ ನೌಕರರ ನೇಮಾಕಾತಿ ತಾನಾಗಿಯೇ ರದ್ದಾಗುವುದು. ಆಲ್ಲದೇ ಸರ್ಕಾರಿ ಸುತ್ತೋಲೆ ಸಂಖ್ಯೆ ಡಿಪಿಎಆರ್: 11.ಎಸ್ಎಲ್ಸಿ 90 ದಿನಾಂಕ 5-9-90ರಲ್ಲಿ ದಿನಗೂಲಿ ಮೇರೆಗೆ ಸಿಬ್ಬಂದಿ ನೇಮಕಾತಿಯನ್ನು ರದ್ದುಪಡಿಸಲಾಗಿದೆ. ಆದುದರಿಂದ, ಶ್ರೀ ಆರ್.ನಟರಾಜ್, ಸಹಾಯಕ ಭೂ ವಿಜ್ಞಾನಿ (ದಿನಗೂಲಿ)ಇವರ ಮರುನೇಮಾಕಾತಿ ಪ್ರಕರಣ ಸರ್ಕಾರಿ ಆದೇಶಗಳ ಪರಿಮಿತಿಯಲ್ಲಿ ಬರುವುದಿಲ್ಲವಾದುದರಿಂದ, ಇವರನ್ನು ಸರ್ಕಾರಿ ಸೇವೆಯಲ್ಲಿ ಪುನರ್ ನೇಮಕಾತಿಃ ಸಕ್ರಮಗೊಳಿಸಲು ಅರ್ಹರಿರುವುದಿಲ್ಲ.

ಆ) ಮೇಲಿನ ಸನ್ನಿವೇಶದಲ್ಲಿ ಉದ್ಭವಿಸುವುದಿಲ್ಲ.

ನಿರ್ಮಲ ಕರ್ನಾಟಕ ಯೋಜನೆಯಡಿಯಲ್ಲಿ ಶೌಚಾಲಯಗಳ ನಿರ್ಮಾಣ

725 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿರ್ಮಲ ಕರ್ನಾಟಕ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ ?

ಆ) ಪ್ರತಿ ಜಿಲ್ಲೆಯ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ನಿರ್ಮಲ ಕರ್ನಾಟಕ ಯೋಜನೆಯಡಿ, ರಾಜ್ಯದಲ್ಲಿ ದಿ:2-10-95ರಿಂದ 31-1-97ರ ಅವಧಿಯಲ್ಲಿ ಒಟ್ಟು 2,68,370 ಶೌಚಾಲಯಗಳನ್ನು ಕಟ್ಟಲಾಗಿದೆ.

ಆ) ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - (1) ರಲ್ಲಿ ನೀಡಿದೆ.

ತಾಲ್ಲೂಕುವಾರು ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಂದ ಪಡೆಯಲಾಗುತ್ತಿದೆ.

ಅನುಬಂಧ-1 / ANNEXUXRE-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1323ಕ್ಕೆ ಸಂಬಂಧಿಸಿದಂತೆ ನಿರ್ಮಲ ಕರ್ನಾಟಕ ಯೋಜನೆಯಡಿ ದಿ:2-10-95ರಿಂದ 31-1-97ರವರೆಗೆ ಕಟ್ಟಲಾದ ಜಿಲ್ಲಾವಾರು ಶೌಚಾಲಯಗಳ ವಿವರಗಳು:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕಟ್ಟಲಾದ ಶೌಚಾಲಯಗಳ ಸಂಖ್ಯೆ
1.	ಬೆಂಗಳೂರು (ಗ್ರಾ)	10771
2.	ಬೆಂಗಳೂರು (ನಗರ)	10423
3.	ಬೆಳಗಾಂ	23486
4.	ಬಳ್ಳಾರಿ	16786
5.	ಬೀದರ್	9470
6.	ಬಿಜಾಪುರ	12431
7.	ಚಿಕ್ಕಮಗಳೂರು	12340
8.	ಚಿತ್ರದುರ್ಗ	10273
9.	ದಕ್ಷಿಣ ಕನ್ನಡ	31619
10.	ಧಾರವಾಡ	11802
11.	ಗುಲ್ಬರ್ಗಾ	11459
12.	ಹಾಸನ	13221
13.	ಕೊಡಗು	4875
14.	ಕೋಲಾರ	3552
15.	ಮಂಡ್ಯ	10558
16.	ಮೈಸೂರು	20144
17.	ರಾಯಚೂರು	9847
18.	ಶಿವಮೊಗ್ಗ	31600
19.	ತುಮಕೂರು	7924
20.	ಉತ್ತರ ಕನ್ನಡ	5789
	ಒಟ್ಟು	**2,08,370**